# ಕರ್ನಾಟಕ ವಿಧಾನ ಪರಿಷತ್

| | |
|---|---|
| ಸದಸ್ಯರ ಹೆಸರು | : **ಡಾ: ಯತೀಂದ್ರ ಎಸ್** |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **1297** |
| ಉತ್ತರಿಸಬೇಕಾದ ದಿನಾಂಕ | : 19.03.2025 |
| ಉತ್ತರಿಸಬೇಕಾದ ಸಚಿವರು | : ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಾದ್ಯಂತ ನಿವೇಶನ ರಹಿತ ಕುಟುಂಬಗಳ ಕುರಿತು ಸಮೀಕ್ಷೆ ನಡೆಸಿದ್ದಲ್ಲಿ ರಾಜ್ಯದಾದ್ಯಂತ ಪ್ರಸ್ತುತ ಎಷ್ಟು ಕುಟುಂಬಗಳು ನಿವೇಶನರಹಿತವಾಗಿವೆ; (ಜಿಲ್ಲಾವಾರು ನಗರ ಮತ್ತು ಗ್ರಾಮೀಣ ಪ್ರದೇಶಗಳ ವಿವರವನ್ನು ಪ್ರತ್ಯೇಕವಾಗಿ ಒದಗಿಸುವುದು) | ರಾಜ್ಯಾದ್ಯಂತ 2018 ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಸತಿ/ ನಿವೇಶನರಹಿತರ ಸಮೀಕ್ಷೆ ಹಾಗೂ 2017 ಮತ್ತು 2018 ರಲ್ಲಿ ನಗರ ಪ್ರದೇಶಲ್ಲಿ ಬೇಡಿಕೆ ಸಮೀಕ್ಷೆ ಕೈಗೊಂಡಿದ್ದು, ಸದರಿ ಸಮೀಕ್ಷೆ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ 696668 ಮತ್ತು ನಗರ ಪ್ರದೇಶದಲ್ಲಿ 1027657 ನಿವೇಶನರಹಿತರು ಕಂಡು ಬಂದಿರುತ್ತಾರೆ.<br><br>ಪ್ರಸ್ತುತ ಗ್ರಾಮೀಣ ಪ್ರದೇಶದಲ್ಲಿ ಪ್ರಧಾನಮಂತ್ರಿ ಆವಾಸ್ (ಗ್ರಾಮೀಣ) ಯೋಜನೆಯಡಿ Awas+24 ವಸತಿ/ನಿವೇಶನರಹಿತರ ಸರ್ವೆ ಕಾರ್ಯ ಪ್ರಾರಂಭಗೊಂಡಿದ್ದು, ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ. |
| ಆ) | ನಿವೇಶನ ರಹಿತ ಕುಟುಂಬಗಳಿಗೆ ನಿವೇಶನ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ಒದಗಿಸುವುದು) | ನಗರ ಮತ್ತು ಗ್ರಾಮೀಣ ಪ್ರದೇಶಗಳ ನಿವೇಶನರಹಿತರ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.<br><br>ಅರ್ಹ ವಸತಿರಹಿತ ಕುಟುಂಬಗಳು ಸ್ವಂತ ನಿವೇಶನ ಹೊಂದಿಲ್ಲದ ಕಾರಣ ವಸತಿ ಸೌಕರ್ಯದಿಂದ ವಂಚಿತರಾಗುತ್ತಿರುವುದನ್ನು ಮನಗಂಡು ರಾಜ್ಯ ಸರ್ಕಾರವು ಗ್ರಾಮೀಣ ಪ್ರದೇಶದಲ್ಲಿ ಮುಖ್ಯಮಂತ್ರಿಗಳ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಮುಖ್ಯಮಂತ್ರಿಗಳ ನಗರ ನಿವೇಶನ ಯೋಜನೆಗಳನ್ನು ಜಾರಿಗೊಳಿಸಿದೆ.<br><br>ಈ ಯೋಜನೆಗಳಡಿ ನಿವೇಶನ ಹಂಚಿಕೆ ಮಾಡಲು ಸರ್ಕಾರಿ ಜಮೀನಿಗೆ ಪ್ರಥಮ ಆದ್ಯತೆ ನೀಡಲಾಗಿದ್ದು, ಸ್ಥಳೀಯವಾಗಿ ಲಭ್ಯವಿರುವ ಸೂಕ್ತ ಸರ್ಕಾರಿ ಜಮೀನನ್ನು ಜಿಲ್ಲಾಧಿಕಾರಿಗಳಿಂದ ಮಂಜೂರು ಮಾಡಿಸಿಕೊಂಡು ನಿವೇಶನ ಹಂಚಿಕೆಗೆ ಬಳಸಿಕೊಳ್ಳಬಹುದಾಗಿದೆ. ಒಂದು ವೇಳೆ ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ಮಾತ್ರ ವಸತಿಗೆ ಸೂಕ್ತ ಖಾಸಗಿ ಜಮೀನನ್ನು ಖರೀದಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಜಮೀನು ಖರೀದಿ ಸಮಿತಿ ಮೂಲಕ ಕ್ರಮವಹಿಸಲಾಗುತ್ತಿದೆ.<br><br>ನಿವೇಶನ ಹಂಚಿಕೆಗೆ ರಾಜ್ಯಾದ್ಯಂತ ಗ್ರಾಮೀಣ ಪ್ರದೇಶದಲ್ಲಿ 1552.82 ಎಕರೆ ಮತ್ತು ನಗರ ಪ್ರದೇಶದಲ್ಲಿ 1169.06 ಎಕರೆ ಒಟ್ಟು 2721.87 ಎಕರೆ ಸರ್ಕಾರಿ ಜಮೀನನ್ನು ಕಾಯ್ದಿರಿಸಲಾಗಿದ್ದು, ಜಮೀನಿನ ಲಭ್ಯತೆ ಹಾಗೂ ಅರ್ಹ ನಿವೇಶನರಹಿತರ ಸಂಖ್ಯೆಗೆ ಅನುಗುಣವಾಗಿ ಹಂತ-ಹಂತವಾಗಿ ನಿವೇಶನ ವಿತರಿಸಲು ಕ್ರಮವಹಿಸಲಾಗುತ್ತಿದ್ದು, ನಿವೇಶನ ಹಂಚಿಕೆಗೆ ಯಾವುದೇ ಕಾಲಮಿತಿ ಇರುವುದಿಲ್ಲ. |

ಸಂಖ್ಯೆ: ವಇ 128 ಹೆಚ್‌ಎಎಂ 2025

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವ

**LCQ - 1297** **ಅನುಬಂಧ - 1**

## ನಿವೇಶನರಹಿತರ ವಿವರ

| ಜಿಲ್ಲೆ | ಗ್ರಾಮೀಣ | ನಗರ | ಒಟ್ಟು |
|---|---|---|---|
| ಬಾಗಲಕೋಟೆ | 31189 | 15762 | 46951 |
| ಬಳ್ಳಾರಿ | 17933 | 39913 | 57846 |
| ಬೆಳಗಾವಿ | 19022 | 23391 | 42413 |
| ಬೆಂಗಳೂರು ಗ್ರಾಮಾಂತರ | 22535 | 13518 | 36053 |
| ಬೆಂಗಳೂರು ನಗರ | 40619 | 414753 | 455372 |
| ಬೀದರ | 4507 | 19384 | 23891 |
| ಚಾಮರಾಜನಗರ | 37215 | 10064 | 47279 |
| ಚಿಕ್ಕಬಳ್ಳಾಪುರ | 26466 | 16536 | 43002 |
| ಚಿಕ್ಕಮಗಳೂರು | 33180 | 13809 | 46989 |
| ಚಿತ್ರದುರ್ಗ | 26473 | 27755 | 54228 |
| ದಕ್ಷಿಣ ಕನ್ನಡ | 30737 | 10100 | 40837 |
| ದಾವಣಗೆರೆ | 24449 | 38589 | 63038 |
| ಧಾರವಾಡ | 15729 | 34412 | 50141 |
| ಗದಗ | 26582 | 17359 | 43941 |
| ಹಾಸನ | 8268 | 19880 | 28148 |
| ಹಾವೇರಿ | 14858 | 15568 | 30426 |
| ಕಲಬುರಗಿ | 4588 | 31614 | 36202 |
| ಕೊಡಗು | 16170 | 3120 | 19290 |
| ಕೋಲಾರ | 10059 | 21556 | 31615 |
| ಕೊಪ್ಪಳ | 15241 | 19231 | 34472 |
| ಮಂಡ್ಯ | 41085 | 7337 | 48422 |
| ಮೈಸೂರು | 40407 | 59884 | 100291 |
| ರಾಯಚೂರು | 16264 | 8885 | 25149 |
| ರಾಮನಗರ | 18609 | 22126 | 40735 |
| ಶಿವಮೊಗ್ಗ | 31335 | 35028 | 66363 |
| ತುಮಕೂರು | 29170 | 38465 | 67635 |
| ಉಡುಪಿ | 31889 | 1071 | 32960 |
| ಉತ್ತರಕನ್ನಡ | 26421 | 8111 | 34532 |
| ವಿಜಯನಗರ | 13002 | 11369 | 24371 |
| ವಿಜಯಪುರ | 14237 | 27824 | 42061 |
| ಯಾದಗಿರಿ | 8429 | 1243 | 9672 |
| **ಒಟ್ಟು** | **696668** | **1027657** | **1724325** |